ಅಸಲು ದಾವಾ ಸಂಖ್ಯೆ - 129/2010
ದಿನಾಂಕಃ 31-05-2019
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು - ಶ್ರೀ ಎಸ್ ಎ ಕೆ ವಕೀಲರಿಂದ.

ನನ್ನ ತಂದೆ ಹೆಸರು ಸೋಮಲೆಪ್ಪ. ಮಲ್ಲಪ್ಪ ನನ್ನ ಅಣ್ಣ. ನಿಪಿ-18 ರಲ್ಲಿ ಮಲ್ಲಪ್ಪನ ಹೆಸರು ದಾಖಲಿದೆ ಅಂದರೆ ಸರಿಯಲ್ಲ. ನಿಪಿ-18 ರಲ್ಲಿ ಕಾಣಿಸಿರುವ ಆಸ್ತಿ ಮೂಲತಃ ನನ್ನ ಅಜ್ಜನ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಿಪಿ-18 ರಲ್ಲಿ ಕಾಣಿಸಿರುವ ಆಸ್ತಿ ನಮ್ಮ ಮನೆತನಕ್ಕೆ ಸಂಬಂಧಿಸಿದ ಆಸ್ತಿ ಅಂದರೆ ಸರಿಯಲ್ಲ. ನಿಪಿ-18 ರಲ್ಲಿ ಕಾಣಿಸಿರುವ ಆಸ್ತಿ ನಮ್ಮ ಅಜ್ಜನ ಆಸ್ತಿ ಅಲ್ಲ ಅಂದರೆ ಸರಿಯಲ್ಲ. ನನಗೆ ಯಾವ ವಯಸ್ಸಿನಲ್ಲಿ ತಿಳುವಳಿಕೆ ಬಂದಿತ್ತು ನನಗೆ ನೆನಪಿಲ್ಲ. ದಾವಾ ಆಸ್ತಿಗಳು ಯಾವ ಕಾಲಕ್ಕೂ ನನ್ನ ಅಜ್ಜನ ಹೆಸರಿಗಾಗಲೀ ನನ್ನ ತಂದೆ ಹೆಸರಿಗಾಗಲೀ ಇರಲಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನ್ನದು ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇರದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.